
## ಗಿಂಡಿಯಲ್ಲಿ ಗಂಗೆ



ಕವಿ, ಕಥೆಗಾರ ಚಿಂತಾಮಣಿ ಕೊಡ್ಲೆಕೆರೆ ಅವರ 'ಗಿಂಡಿಯಲ್ಲಿ ಗಂಗೆ' ಲೇಖಕರೇ ಹೇಳಿರುವಂತೆ, 'ಕಥೆಗಳ ಬೆನ್ನು ಹತ್ತಿದ ಒಂದು ಪ್ರವಾಸಕಥನ'. ಕಣ್ಣು ಕಂಡದ್ದನ್ನು ಕಾಣಿಸುವುದು ಪ್ರವಾಸ ಕಥನಗಳ ಸಾಮಾನ್ಯ ಲಕ್ಷಣ. ಆದರೆ, ಚಿಂತಾಮಣಿಯವರ ಕಥನದ ವಿಶೇಷ ಇರುವುದು ಮನಸ್ಸು ಕಂಡಿದ್ದನ್ನು ಕಾಣಿಸುವ ಪ್ರಯತ್ನದಲ್ಲಿ. ತನ್ನ ಭಾವಕೋಶದ ಭಾಗವಾದ ಕಥೆಗಳನ್ನು, ನಂಬಿಕೆಗಳನ್ನು ಲೇಖಕರು ಈ ಪ್ರವಾಸಕಥನದಲ್ಲಿ ಶೋಧಿಸಲು ಹೊರಟಂತಿದೆ. ಭಕ್ತಿಯನ್ನು ಭಿತ್ತಿಯಾಗಿಸಿಕೊಂಡ ಕವಿಹೃದಯ ಗಂಗೆಯನ್ನು ಕೇಂದ್ರವಾಗಿಸಿಕೊಂಡು ನಡೆಸಿದ ತೀರ್ಥಯಾತ್ರೆ, ನೆಲದ ಬಿಂಬಗಳನ್ನು ಹಿಡಿಯುವುದರ ಜೊತೆಗೆ, ಆ ನೆಲದ ಮಾನುಷವ್ಯವಹಾರವನ್ನೂ ಕುತೂಹಲದಿಂದ ಗಮನಿಸಿದೆ. ಭಕ್ತಿ ಮತ್ತು ಸೃಜನಶೀಲತೆ ಒಟ್ಟೊಟ್ಟಿಗೆ ಸಾಗಿದಾಗ ರೂಪುಗೊಳ್ಳುವ ದರ್ಶನ ಇಲ್ಲಿನ ಕೆಲವು ಬರಹಗಳಲ್ಲಿ ಇಣುಕುತ್ತದೆ. ಭಾನು ಭುವಿಯನ್ನು ಒಂದಾಗಿಸುವಂತೆ ಕಾಣಿಸುವ ಗಂಗಾರತಿಯ ಬಗ್ಗೆ ಭಾವುಕವಾಗಿ ಬರೆಯುವ ಲೇಖಕರು, ಅಂತಿಮವಾಗಿ ತಲುಪುವುದು – 'ಮನುಷ್ಯ ಕತ್ತಲನ್ನು ಗೆಲ್ಲಬಲ್ಲ. ಅದಕ್ಕೆ ಅವನೊಂದು ಹಣತೆ ಹಚ್ಚಿದರೂ ಬೇಕಾದಷ್ಟಾಯಿತು. ಅದೇ ಆರತಿಯೂ ಆಗುವುದು. ಮುಂದೆ ಸಾಗಲು ಬೆಳಕೂ ಆಗುವುದು'. ಇಂಥ ಬೆಳಕಿನ ಹೊಳಪಿನ ಸಾಲುಗಳು ಕೃತಿಯುದ್ದಕ್ಕೂ ಇವೆ.

**ಲೇ: ಚಿಂತಾಮಣಿ ಕೊಡ್ಲೆಕೆರೆ, ಪು: 144, ಬೆಲೆ: ₹. 144, ಪ್ರ: ಚಿತ್ರಮೂಲ ಪ್ರಕಾಶನ, ಬೆಂಗಳೂರು. ಫೋನ್: 9449855858.**

## ಭೂಮಿಯ ಋಣ




ತಡವಾಗಿ ಬರವಣಿಗೆ ಆರಂಭಿಸಿ ಓದುಗರ ಪ್ರೀತಿ ಗಳಿಸಿದ ಬರಹಗಾರರ ಪರಂಪರೆಯೊಂದು ಕನ್ನಡದಲ್ಲಿದೆ. ಆ ಸಾಲಿಗೆ ಹೊಸ ಸೇರ್ಪಡೆ ಶೋಭಾ ಗುನ್ನಾಪರ. ವಿಜಯಪುರ ಜಿಲ್ಲೆಯ ಶೋಭಾ ಅವರ ಚೊಚ್ಚಿಲ ಕಥಾಸಂಕಲನ 'ಭೂಮಿಯ ಋಣ'. ಬದುಕಿನ ಬಗ್ಗೆ ಯಾವ ಬಗೆಯ ಕಹಿಯನ್ನೂ ಉಳಿಸಿಕೊಳ್ಳದ ಮಾಗಿದ ಮನಸ್ಸಿನ ಒಂಬತ್ತು ಕಥೆಗಳು ಈ ಸಂಕಲನದಲ್ಲಿವೆ. ಕಥೆಗಾರ್ತಿಯಾಗಿ ವಿಳಂಬವಾಗಿ ಪ್ರಕಟಗೊಳ್ಳುತ್ತಿದ್ದರೂ, ಸಾಮಾಜಿಕ ಚಟುವಟಿಕೆಗಳಿಗೆ ಅವರು ಹಳಬರು. ಆ ಒಡನಾಟದ ದ್ರವ್ಯವನ್ನು ಇಲ್ಲಿನ ಕಥೆಗಳಲ್ಲಿ ಕಾಣಬಹುದು. ಬದುಕಿನ ಯಾವುದಾದರೊಂದು ಕ್ಷಣದ ವಿವಿಧ ಆಯಾಮಗಳ ಶೋಧಕ್ಕಿಂತಲೂ, ಬದುಕನ್ನು ಸಮಗ್ರವಾಗಿ ಕಾಣಿಸಲು ಇಲ್ಲಿನ ಕಥೆಗಳು ತವಕಿಸುತ್ತವೆ. ಬದುಕಿನ ಕುರಿತು ಹುಸಿ ಭರವಸೆಗಳನ್ನು ಕಟ್ಟಿಕೊಡದೆ, ಕಟು ವಾಸ್ತವದ ನೆಲೆಗಟ್ಟಿನಲ್ಲಿ ರೂಪುಗೊಂಡಿರುವ ಕಥೆಗಳು, ಕೊನೆಮೊದಲಿಲ್ಲದ ಸಂಕಷ್ಟಗಳನ್ನು ಬದುಕುತ್ತಿರುವ ಜೀವಗಳನ್ನು ಓದುಗರಿಗೆ ಮುಖಾಮುಖಿಯಾಗಿಸುತ್ತವೆ. ಸುಡುಬಿಸಿಲಿನ ಮಣ್ಣಲ್ಲಿ ಕನಸುಗಳನ್ನು ಹೆಕ್ಕುವ ರೈತಾಪಿ ಮಂದಿಯ ತವಕತಲ್ಲಣಗಳು 'ಭೂಮಿಯ ಋಣ'ದ ಕಥೆಗಳಾಗಿವೆ. ಭರವಸೆಗಳನ್ನೆಲ್ಲ ಕಳೆದುಕೊಂಡಂತಹ ಸನ್ನಿವೇಶದಲ್ಲೂ ಜೀವಿಸುವ ಛಲವನ್ನು ಬಿಟ್ಟುಕೊಡದ ದಿಟ್ಟ ಜೀವಗಳು, ವಿಶೇಷವಾಗಿ ಹೆಣ್ಣುಮಕ್ಕಳು ಇಲ್ಲಿದ್ದಾರೆ.

**ಲೇ: ಶೋಭಾ ಗುನ್ನಾಪುರ, ಪು: 128, ಬೆ: ₹. 100, ಪ್ರ: ವೈಷ್ಣವಿ ಪ್ರಕಾಶನ, ಗುಡದಿನ್ನಿ. ಫೋನ್: 9620170027.**